For more job news visit : www.kpscvaani.com

ಮರ್ಚಂಟ್ಸ್ ಪತ್ತಿನ ಸಹಕಾರಿ ಸಂಘ ನಿ.ಕೆರೂರ

ಆಡಳಿತ ನೇಮಕಾತಿ -2022-2023 ದಿನಾಂಕ : 10/02/2023

ನೇಮಕಾತಿ ಪ್ರಕಟಣೆ

ಮರ್ಚಂಟ್ಸ್ ಪತ್ತಿನ ಸಹಕಾರಿ ಸಂಘ ನಿ.ಕೆರೂರ ಶಾಃ ಬದಾಮಿ ಇದರಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕ -5 ಮತ್ತು ಸಿಪಾಯಿ-ಚೌಕಿದಾರ 8 ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಯೊಂದಿಗೆ ದ್ವಿ.ಸ ಹುದ್ದೆಗೆ ಸಾಮಾನ್ಯ ಅಭ್ಯರ್ಥಿಗಳು/ಹಿಂದುಳಿದ ಅಭ್ಯರ್ಥಿಗಳು 1000/-,ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಅಭ್ಯರ್ಥಿಗಳು 500/- ಹಾಗೂ ಸಿಪಾಯಿ ಹುದ್ದೆಗೆ ಸಾಮಾನ್ಯ ಅಭ್ಯರ್ಥಿಗಳು/ಹಿಂದುಳಿದ ಅಭ್ಯರ್ಥಿಗಳು 500/-,ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಅಭ್ಯರ್ಥಿಗಳು 250/- ಸಂಘದ ಖಾತೆಗೆ ನೇರವಾಗಿ ಡಿಡಿಯನ್ನು ಮುಖ್ಯಕಾರ್ಯನಿರ್ವಾಹಕರು ಮರ್ಚಂಟ್ಸ್ ಪತ್ತಿನ ಸಹಕಾರಿ ಸಂಘ ನಿ.ಕೆರೂರ ಶಾಃ ಬದಾಮಿ ಸ್ಥಳದಲ್ಲಿ ಸಂದಾಯವಾಗುವಂತೆ ಪಡೆದ ಅರ್ಜಿಯ ಜೊತೆಗೆ ಲಗತ್ತಿಸಬೇಕು ಇತ್ತೀಚಿನ ಪಾಸಪೋರ್ಟ ಅಳತೆಯ 01 ಭಾವಚಿತ್ರವನ್ನು ಅರ್ಜಿಯ ಮೇಲ್ಭಾಗದಲ್ಲಿ ಲಗತ್ತಿಸಿ ಹುದ್ದೆಗೆ ನಿಗಧಿಪಡಿಸಿದ ವಿದ್ಯಾರ್ಹತೆಯ ಅರ್ಹತಾ ಪರೀಕ್ಷೆಯ ಎಲ್ಲಾ ವರ್ಷಗಳ ಅಂಕಪಟ್ಟಿಗಳ ಜೊತೆಗೆ ಜನ್ಮದಿನಾಂಕ ಜಾತಿ/ವರ್ಗಗಳಿಗೆ ಸಂಬಂಧಿಸಿದ ದಾಖಲೆಗಳಿಗೆ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಅರ್ಜಿಯೊಂದಿಗೆ ಮುಚ್ಚಿರುವಲಕೋಟೆಯಲ್ಲಿ ಮರ್ಚಂಟ್ಸ್ ಪತ್ತಿನ ಸಹಕಾರಿ ಸಂಘ ನಿ.ಕೆರೂರ ಶಾಃ ಬದಾಮಿ ಜಿಃ ಬಾಗಲಕೋಟೆ ಪಿನ್‌ಕೋಡ್-587206 ಈ ವಿಳಾಸಕ್ಕೆ ದಿನಾಂಕ : 03/03/2023 ರ ಸಾಯಂಕಾಲ 5-00 ಘಂಟೆಯ ಒಳಗಾಗಿ ತಲುಪಿಸುವಂತೆ ಕಳುಹಿಸಿಕೊಡತಕ್ಕದ್ದು ನಿಗದಿಪಡಿಸಿದ ಅರ್ಜಿ ಮತ್ತು ಸಲ್ಲಿಸುವ ಲಕೋಟೆಯ ಮೇಲೆ ತಪ್ಪದೆ ಅರ್ಜಿ ಸಲ್ಲಿಸಿದ ಹುದ್ದೆಯ ಹೆಸರನ್ನು ಸ್ಪಷ್ಟವಾಗಿ ನಮೂದಿಸುವದು.

ಅರ್ಜಿ ಪ್ರಾರಂಭ : 10/02/2023 ಮುಂಜಾನೆ 10-00 ಘಂಟೆಗೆ ಕೊನೆಯ ದಿನಾಂಕ: 03/03/2023 ಸಾಯಂಕಾಲ 5-00 ಘಂಟೆಗೆ

ವಯೋಮಿತಿ : ಅರ್ಜಿಯನ್ನು ಸ್ವೀಕರಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕಕ್ಕೆ ಅರ್ಹ ಅಭ್ಯರ್ಥಿಗಳ ವಯೋಮಿತಿಯು **ಕನಿಷ್ಠ 18 ವರ್ಷ**ಆಗಿರುತ್ತದೆ

ಅ) ಸಾಮಾನ್ಯ ವರ್ಗ ಗರಿಷ್ಠ 35 ವರ್ಷ

ಬ) ಹಿಂದುಳಿದ ಜಾತಿ ಅಥವಾ ಹಿಂದುಳಿದ ಸಮಾಜ ಅಭ್ಯರ್ಥಿಗಳಿಗೆ ಕನಿಷ್ಠ 38 ವರ್ಷ

ಕ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷ

ಸೂಚನೆ: ಜನ್ಮ ದಿನಾಂಕದ ದೃಢೀಕರಣಕ್ಕಾಗಿ ಪದವಿ/ಎಸ್.ಎಸ್.ಎಲ್.ಸಿ ಅಂಕಪಟ್ಟಿ/ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕೃತ ಪ್ರತಿಯನ್ನು ಲಗತ್ತಿಸತಕ್ಕದ್ದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಯಾ ಮೀಸಲಾತಿಗೆ ನಿಗಧಿಪಡಿಸಲಾದ ನಮೂನೆಯಲ್ಲಿ ಚಾಲ್ತಿಯಲ್ಲಿರುವ ಸಂಬಂದ ಪಟ್ಟ ತಹಶೀಲ್ದಾರರು ನೀಡಿದ ಜಾತಿ ಪ್ರಮಾಣ ಪತ್ರವನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕೃತ ಪ್ರತಿಯ ಅರ್ಜಿಯನ್ನು ಲಗತ್ತಿಸಿರಬೇಕು ನೇರ ನೇಮಕಾತಿಗಾಗಿ ಅರ್ಜಿಯನ್ನು ಸಲ್ಲಿಸಿದ ಅರ್ಹ ಅಭ್ಯರ್ಥಿಗಳ ಪೈಕಿ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಗುಣವಾಗಿ 1:5 ಅನುಪಾತದಲ್ಲಿ ಅರ್ಹತಾ ಪಟ್ಟಿಯನ್ನು ತಯಾರಿಸಿ ಸಂದರ್ಶನಕ್ಕೆ ಕರೆಯಿಲಾಗುವದು

ಅ. ನಂ	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ವೇತನಶ್ರೇಣಿ
1	ದ್ವಿತೀಯ ದರ್ಜೆ ಸಹಾಯಕ	5	16000-400-17200-4500-19000-500-21000-600-24600-700-28800-800-29600
2	ಸಿಪಾಯಿ	3	10400-200-12000-250-13000-300-14200-350-15600-400-16400

ಹಾಗೂ 31 % DA +7 % HRA ಕೊಡಲಾಗುವದು

ಪರತ್ತುಗಳು:

1. ದ್ವಿತೀಯದರ್ಜೆ ಸಹಾಯಕ ಹುದ್ದೆಗೆ ಮಾನ್ಯತೆ ಪಡೆದ ಅಂಗಿಕೃತ ವಿಶ್ವವಿದ್ಯಾಲಯದ ಪದವಿ ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರಬೇಕು ಕನ್ನಡ ಮಾದ್ಯಮದಲ್ಲಿ ವ್ಯಾಸಾಂಗ ಮಾಡಿರಬೇಕು.
2. ಸಿಪಾಯಿ ಹುದ್ದೆಗೆ ಎಸ್.ಎಸ್.ಎಲ್.ಸಿ ಶಿಕ್ಷಣ ಹೊಂದಿರಬೇಕು ಹಾಗೂ ಕನ್ನಡ ಮಾದ್ಯಮದಲ್ಲಿ ವ್ಯಾಸಾಂಗ ಮಾಡಿರಬೇಕು.
3. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆಗೆ ಕನ್ನಡದ ಜ್ಞಾನ ಬರೆಯುವಿಕೆ.ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು
4. ಅಭ್ಯರ್ಥಿಗಳ ಅರ್ಹತೆ ಬಗ್ಗೆ ನೇಮಕಾತಿ ಸಮಿತಿಯು ಶಿಪಾರಸ್ಸು ಅಂತಿಮವಾಗಿರುತ್ತದೆ ಅಂತಿಮ ಆಯ್ಕೆಯು ಆಡಳಿತ ಮಂಡಳಿಯ ಅನುಮೋದನೆಗೆ ಒಳಪಟ್ಟಿರುತ್ತದೆ.
5. ಅಪೂರ್ಣ ಮಾಹಿತಿ ಒಳಗೊಂಡಿರುವ ಹಾಗೂ ಅಗತ್ಯ ಪ್ರಮಾಣ ಪತ್ರಗಳು/ಭಾವಚಿತ್ರಗಳು/ಅರ್ಜಿ ಶುಲ್ಕವಿಲ್ಲದ ಅರ್ಜಿಗಳನ್ನು ಯಾವುದೇ ಸೂಚನೆಯಿಲ್ಲದೆ ತಿರಸ್ಕರಿಸಲಾಗುವದು.
6. ನಿಗಧಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಹಾಗೂ ಅರ್ಜಿ ಶುಲ್ಕವನ್ನು ವಾಪಾಸ ಮಾಡುವದಿಲ್ಲಾ
7. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ಹಿಂದಕ್ಕೆ ಪಡೆಯುವ ಅಥವಾ ರದ್ದು ಪಡಿಸುವ ಅಧಿಕಾರವನ್ನು ನೇಮಕಾತಿ ಸಮಿತಿಯು ಹೊಂದಿರುತ್ತದೆ.
8. ಅರ್ಜಿ ನಮೂನೆಯನ್ನು ಸಂಘದ ಮುಖ್ಯ ಕಛೇರಿಯಲ್ಲಿ ಶುಲ್ಕ 100/- ಗಳನ್ನು ಪಾವತಿಸಿ ಪಡೆಯತಕ್ಕದ್ದು
9. ಹೆಚ್ಚಿನ ಮಾಹಿತಿಗಾಗಿ ಸಂಘದ ಕಛೇರಿಯನ್ನು ಸಂಪರ್ಕಿಸಬೇಕು-9535941855

ಸಹಿ/- ನೇಮಕಾತಿ ಸಮಿತಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರು

ಮರ್ಚಂಟ್ಸ್ ಪತ್ತಿನ ಸಹಕಾರಿ ಸಂಘ ನಿ.ಕೆರೂರ